ಶ್ರೀ ಕೆ. ಎನ್. ರಾಜಣ್ಣ : ನಾನು ಸ್ವಲ್ಪ ತಡವಾಗಿ ಬಂದೆ ತಾವು ನನಗೆ ಪರ್ಮಿಷನ್ ಕೊಟ್ಟರೆ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು : ಆವಾಗಲೇ ಕೊಟ್ಟಿದ್ದನಲ್ಲಾ. ಇವರು ಉತ್ತರ ಕೊಟ್ಟಾದ ಮೇಲೆ ಕೊಡುತ್ತೇನೆ. ಇವರು ಇದಕ್ಕೆ ಉತ್ತರ ಹೇಳಲಿ ನಂತರ ನೀವು ಕೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಈ ಮರಳು ಸಾಗಾಣಿಕೆ ವಿಷಯದಲ್ಲಿ ಇದು ಕೇವಲ ಕೆಲವು ಸ್ಥಳಗಳಲ್ಲಿ ಆಗತಕ್ಕಂಥ ತೊಂದರೆಗಳಿಲ್ಲ. ನನ್ನ ಕ್ಷೇತ್ರದಲ್ಲೂ ಈ ವಿಷಯದಲ್ಲಿ ನಾನು ಹಲವಾರು ರೀತಿಯಲ್ಲಿ ಪ್ರಯತ್ನಗಳನ್ನು ಪಟ್ಟಿದ್ದರೂ ಈ ವಿಷಯದಲ್ಲಿ ಯಶಸ್ಸನ್ನು ಕಾಣಿಸಲಿಕ್ಕೆ ಸಾಧ್ಯವಾಗಿಲ್ಲ. ಪೊಲೀಸ್ ಇಲಾಖೆಯ ಅಧಿಕಾರಿಗಳ ಮೇಲೆ ನೀವೇನು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ. ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಮರಳು ಲಾರಿಗಳನ್ನು ಹಿಡಿಯತಕ್ಕಂಥ ಅವಕಾಶ ಕಾನೂನಿನಲ್ಲಿ ಇಲ್ಲ. ನಾನು ಅದೇ ರೀತಿ ಪೊಲೀಸ್ ಅಧಿಕಾರಿಗಳ ಜೊತೆ ವಿಚಾರ ಮಾಡಿ ನನ್ನ ಕ್ಷೇತ್ರದಲ್ಲಿ ಈ ವಿಷಯದಲ್ಲಿ ಸ್ವಲ್ಪ ದಿವಸದಲ್ಲಿ ಇದನ್ನು ತಡೆಹಿಡಿದೆ ಅದರ ಜೊತೆಗೆ ನಮ್ಮ ರೈತರುಗಳು ಇತ್ತೀಚಿಗೆ ಅವರೇ ಮರಳನ್ನು ವ್ಯಾಪಾರಕ್ಕೆ ಇಳಿದಿರುವಂಥದ್ದು ನಾವು ಹಲವಾರು ಸ್ಥಳಗಳಲ್ಲಿ ನೋಡುತ್ತಿದ್ದೇವೆ. ಈ ವಿಷಯದಲ್ಲಿ ರಾಜಕಿಯವಾಗಿ ಒಂದು ಸೂಕ್ಷ್ಮವಾದ ವಿಚಾರಗಳಿವೆ. ಇವತ್ತು ತಾವು ಹೇಳಿದ ಹಾಗೆ, ಸದನದ ಎಲ್ಲಾ ವಿರೋದ ಪಕ್ಷಗಳ ನಾಯಕರುಗಳನ್ನು ಕರೆದು ಸಭೆಯನ್ನು ಮಾಡಿ ಈ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಈ ಒಂದು ಸಮಗ್ರವಾದ ಹೊಸ ನೀತಿಯನ್ನು ಗಣಿ ಇಲಾಖೆಯಿಂದ ತರತಕ್ಕಂಥದ್ದಕ್ಕೆ ಗಮನಹರಿಸುತ್ತೇನೆ.

ಅಧ್ಯಕ್ಷರು : ಈಗ ರಾಜಣ್ಣನವರು.

ತುಮಕೂರು ಜಿಲ್ಲೆಯಲ್ಲಿ ಅಕ್ರಮವಾಗಿ ಖನಿಜ ತೆಗೆಯುತ್ತಿರುವುದು ಮತ್ತು ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ.

(3) 90. ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ತುಮಕೂರು ಜಿಲ್ಲೆಯಲ್ಲಿ ಅಕ್ರಮವಾಗಿ ಖನಿಜ ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಇ) ಅಕ್ರಮವಾಗಿ ಗಣಿಗಾರಿಕೆ ನಡೆಸಲು ಸರ್ಕಾರ ಪರವಾನಗಿ ನೀಡಿದೆಯೇ;

ಈ) ಹಾಗಿದ್ದಲ್ಲಿ, ಇದಕ್ಕೆ ಅನುಸರಿಸುವ ಮಾನದಂಡಗಳೇನು;

ಉ) ವಿವಿಧ ಗಣಿಗಾರಿಕೆಯಿಂದ ತುಮಕೂರು ಜಿಲ್ಲೆಯ ವ್ಯಾಪ್ತಿಯಿಂದ ಸರ್ಕಾರಕ್ಕೆ ಪಾವತಿಯಾಗಿರುವ ವರಮಾನವೆಷ್ಟು ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

ಅ) ಹೌದು.

ಆ) ಅಕ್ರಮ ಗಣಿಗಾರಿಕೆ ಬಗ್ಗೆ ದೂರು ಅಥವಾ ವರದಿಗಳು ಇಲಾಖಾ ಕಛೇರಿಯ ಗಮನಕ್ಕೆ ಬಂದಾಗ ಸದರಿ ಪ್ರದೇಶಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲಾಗುತ್ತಿದೆ. ಹಾಗೂ ಅನಧಿಕೃತವಾಗಿ ಇಲಾಖೆಯ ಪರವಾನಗಿ ಇಲ್ಲದೆ ಸಾಗಾಣಿಕೆ ಮಾಡುತ್ತಿರುವ ವಾಹನಗಳನ್ನು ವಶಪಡಿಸಿಕೊಂಡು ಎಂ.ಎಂ.(ಡಿಮತ್ತುಆರ್) ಕಾಯ್ದೆ, 1957 ಹಾಗೂ ಖನಿಜ ರಿಯಾಯಿತಿ ನಿಯಮಾವಳಿ, 1960ರನುಸಾರ ದಂಡ ವಿಧಿಸಲಾಗುತ್ತಿದೆ. ಹಾಗೂ ಇದರ ಸಂಬಂಧ ಮೊಕದ್ದಮೆಗಳನ್ನು ದಾಖಲಿಸಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ. ಇತ್ತೀಚೆಗೆ ಜಿಲ್ಲೆಯ ಪಟ್ಟಾ ಜಮೀನುಗಳಲ್ಲಿ ಕಬ್ಬಿಣದ ಜಲ್ಲಿಯ ಅನಧಿಕೃತ ಗಣಿಗಾರಿಕೆ ಕಂಡು ಬಂದಿದ್ದು, ಸದರಿ ಗಣಿಗಾರಿಕೆಯನ್ನು ನಿಯಂತ್ರಿಸುವುದರ ಜೊತೆಯಲ್ಲಿ ಸಂಬಂಧಿಸಿದ ತಹಸೀಲ್ದಾರರಿಗೆ ಪತ್ರ ಬರೆದು ಈ ಜಮೀನಿನ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಹಾಗೂ ಸಂಬಂಧಿಸಿದ ಪೊಲೀಸ್ ಠಾಣೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಕೋರಲಾಗಿದೆ. ಇದರ ಜೊತೆಗೆ ಅನಧಿಕೃತ ಗಣಿಗಾರಿಕೆ ಮಾಡಿ ಸಂಗ್ರಹಿಸಿದ ದಾಸ್ತಾನನ್ನು ಇಲಾಖೆಗೆ ವಶಪಡಿಸಿಕೊಂಡು ಹರಾಜು ಮೂಲಕ ವಿಲೇವಾರಿ ಮಾಡಿ 2005-06ನೇ ಸಾಲಿನಲ್ಲಿ ರೂ. 6,20,000.00ಗಳನ್ನು ಸರ್ಕಾರಕ್ಕೆ ಜಮಾ ಮಾಡಲಾಗಿದೆ. 2005-06ನೇ ಸಾಲಿನಲ್ಲಿ ಇಲಾಖೆ ಒಟ್ಟು 39 ವಾಹನಗಳಿಗೆ ದಂಡ ವಿಧಿಸಿ ಒಟ್ಟು ರೂ. 9,79,000.00 ವಸೂಲಾತಿ ಮಾಡಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ದಿನಾಂಕ : 01-04-2005 ರಿಂದ 16-03-2006 ರವರೆಗೆ ಈ ಕೆಳಕಂಡಂತೆ ಸರ್ಕಾರಕ್ಕೆ ರಾಜಧನ ಬಂದಿರುತ್ತದೆ :

ಖನಿಜ ಗಣಿಗುತ್ತಿಗೆ, ಕಲ್ಲು ಗಣಿಗುತ್ತಿಗೆಗಳಿಂದ ಒಟ್ಟು ಮೊತ್ತ ರೂ. 6,35,08,636.00.

ಶ್ರೀ ಕೆ. ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿದೆ. ಇದರಲ್ಲಿ ಅಕ್ರಮ ಗಣಿಗಾರಿಕೆ ಬಗ್ಗೆ ದೂರುಗಳು ಅಥವಾ ವರದಿಗಳು ಇಲಾಖಾ ಗಮನಕ್ಕೆ ಬಂದಿವೆ ಎಂದು ಬರೆದಿದ್ದಾರೆ. ಅಕ್ರಮ ಗಣಿಗಾರಿಕೆ ಬಗ್ಗೆ ಫಾರೆಸ್ಟ್ ಜಮೀನಿನಲ್ಲಿ

ಎಷ್ಟು ಅಕ್ರಮ ಗಣಿಗಾರಿಕೆ ನಡೆದಿದೆ ಎನ್ನುವುದರ ಬಗ್ಗೆ ದೂರೂ ಬಂದಿವೆ? ಹಾಗೆಯೇ ಪಟ್ಟಾ ಜಮೀನಿನಲ್ಲಿ ಎಷ್ಟು ಅಕ್ರಮ ಗಣಿಗಾರಿಕೆ ನಡೆದಿದೆ ಎನ್ನುವುದರ ಬಗ್ಗೆ ಸರ್ಕಾರಕ್ಕೆ ದೂರು ಬಂದಿದೆಯೇ ಎನ್ನುವುದು ಮೊದಲನೇ ಉಪಪ್ರಶ್ನೆ. ಅದರ ಜೊತೆಯಲ್ಲಿ 2005–06 ರಲ್ಲಿ ವಶಪಡಿಸಿಕೊಂಡಿದ್ದನ್ನು ಹರಾಜು ಮೂಲಕ ವಿಲೇ ಮಾಡಿ ಆರು ಲಕ್ಷ ಇಪ್ಪತ್ತು ಸಾವಿರ ರೂಪಾಯಿ ಸರ್ಕಾರಕ್ಕೆ ಜಮಾ ಬಂದಿದೆ. ವಾಹನಗಳಿಗೆ ದಂಡ ಹಾಕಿ ಒಂಬತ್ತು ಲಕ್ಷ ಎಪ್ಪತ್ತೊಂಬತ್ತು ಸಾವಿರ ರೂಪಾಯಿ ವಸೂಲಾತಿ ಮಾಡಿದ್ದೇವೆಂದು ಹೇಳಿದ್ದಾರೆ. ಇದು ಲೆಕ್ಕ ಹಾಕಿದರೆ ಬಹಳ ಕಡಿಮೆಯಾಗುತ್ತದೆ. ಇದು ಏನೇನೂ ಇಲ್ಲ. ಇನ್ನು ಹೆಚ್ಚು ಅಕ್ರಮವಾಗಿ ಗಣಿಗಾರಿಕೆ ನಡೆಯತಕ್ಕಂಥದ್ದು ಇದೆ ನಾನು ಜಿಲ್ಲೆಗೆ ಸೀಮಿತವಾಗಿ ಕೇಳಿದ್ದೇನೆ, ಇಡೀ ರಾಜ್ಯದಲ್ಲಿ ಅವ್ಯಾಹತವಾಗಿ ನಡೆಯತಕ್ಕಂಥದ್ದು ಎಲ್ಲರ ಗಮನದಲ್ಲಿದೆ. ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಿಕ್ಕೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತದೆ ಏನ್ನುವ ಮಾಹಿತಿಯನ್ನು ಸದನಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಂದ ನಾನು ಬಯಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಅಲ್ಪ ಸ್ವಲ್ಪ ಪ್ರಮಾಣದಲ್ಲಿ ನಡೆಯುತ್ತಿಲ್ಲ. ಬೆಂಗಳೂರಿನಿಂದ ಬಂದು ಚಿಕ್ಕನಾಯಕನಹಳ್ಳಿಯಲ್ಲಿ ವಾಸವಾಗಿ ಕಿಬ್ಬಳ್ಳಿ ಕ್ರಾಸ್‌ನಲ್ಲಿ ವಾಸ ಇದ್ದುಕೊಂಡು ಆಫೀಸ್‌ಗಳನ್ನು ಓಪನ್ ಮಾಡಿಕೊಂಡು ರಾತ್ರಿ ಎಲ್ಲಾ ಸೇರಿಕೊಂಡು ಎಲ್ಲಾ ಮಂತ್ರಿಗಳ ಹೆಸರುಗಳನ್ನು ಹೇಳಿಕೊಂಡು, ನನಗೆ ಆ ಮಂತ್ರಿ ರಕ್ಷಣೆ ಇದೆ, ಈ ಮಂತ್ರಿ ರಕ್ಷಣೆ ಇದೆ ಎಂದು ಹೇಳಿಕೊಂಡು ಮಾರಸಂದ್ರದಲ್ಲಿ ಒಂದು ಸ್ಟಾಕ್‌ಯಾರ್ಡ್ ಮಾಡಿಕೊಂಡು ಇಡೀ ರಾತ್ರಿ ಎಲ್ಲಾ ನಮಗೆ ನಿದ್ದೆ ಬರಲಾರದಂಥ ಸ್ಥಿತಿ ಚಿಕ್ಕನಾಯಕನಹಳ್ಳಿ – ಗುಬ್ಬಿ ಭಾಗದಲ್ಲಿ ನಿರ್ಮಾಣವಾಗಿಬಿಟ್ಟಿದೆ. ಇದರಲ್ಲಿ ಬಹಳ ದೊಡ್ಡವರು ಇದ್ದಾರೆಂದು ಗುಮಾನಿ ಇರುವುದು.

ಶ್ರೀ ಎನ್. ಚೆಲುವರಾಯಸ್ವಾಮಿ : ಯಾವ ಎಂಎಲ್‌ಎ ಗಳ ಹೆಸರುಗಳನ್ನು ಹೇಳಲಿಲ್ಲವೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ನನ್ನ ಹೆಸರೇ ಹೇಳಬೇಕಾಗಿತ್ತು ಎಕೋ ಎನೋ ಹೇಳಿಲ್ಲ, ಹೇಳುವುದಕ್ಕೆ ಆಗುವುದಿಲ್ಲ ಏಕೆಂದರೆ, ಅಲ್ಲಿ ರಾಜಣ್ಣ ಮತ್ತು ನಾನೇ ಅಲ್ಲಿ ಇರುವವರು. ಇದರಲ್ಲಿ ಏನಾಗಿದೆ, ಎಂದರೆ ಯಾರನ್ನು ಯಾರು ಮುಟ್ಟುವುದಕ್ಕೆ ಆಗುತ್ತಿಲ್ಲ. ಫಾರೆಸ್ಟ್ ಲ್ಯಾಂಡ್‌ಗೆ ಹೋಗಿ ಫಾರೆಸ್ಟ್‌ನವರು ಹಿಡಿಯುತ್ತಾರೆಂದರೆ ರೆವಿನ್ಯೂ ಲ್ಯಾಂಡ್‌ನಲ್ಲಿ ಮಾಡುತ್ತೇವೆ ಎನ್ನುತ್ತಾರೆ. ರೆವಿನ್ಯೂನವರು ಹಿಡಿಯುತ್ತಾರೆ ಎಂದರೆ ನಿಮಗೆ ಅಧಿಕಾರ ಇಲ್ಲ ಪೋಲೀಸ್ ನವರು ಬರಲಿ ಎನ್ನುತ್ತಾರೆ. ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯವರು ಆ

ಭಾಗಕ್ಕೆ ಇವತ್ತು ಬರುತ್ತಾ ಇಲ್ಲ. ವಾಸ್ತವವಾಗಿ ಪರ್ಮಿಟ್ ಇರುವ ಲೋಡ್‌ಗಳನ್ನು ನಿಲ್ಲಿಸುತ್ತಾರೆ. ರಾತ್ರಿ ಎಲ್ಲಾ ಈ ಕದ್ದು ಹೊಡೆಯುವುದು ಬಹಳ ನಡೆಯುತ್ತಿದೆ. ಇದಕ್ಕೆ ಏನಾದರೂ ಮಾಡಬೇಕು. ಅದರ ಜೊತೆಗೆ ಐಬಿಎಂನವರು ಸೀಟ್ ಮಾಡಿದ್ದರು. ಒಂದು ಲಕ್ಷ ಟನ್‌ನಷ್ಟು ಮೈನ್ಸ್ ಅನ್ನು ಇನ್ನೇನು ಹರಾಜು ಮಾಡಬೇಕು ಆರೂವರೆ ಕೋಟಿ ರೂಪಾಯಿಗೆ ಹರಾಜು ಆಗಬೇಕಾಗಿದ್ದ ಮೈನ್ಸ್‌ನ್ನು ಧಿಡೀರ್ ಎಂದು ಡೈರೆಕ್ಟರ್ ಸ್ಟಾಪ್ ಮಾಡಿ ಅಲ್ಲಿ ಒಂದು ವರ್ಷ ಆಗುತ್ತಾ ಬಂತು, ಸುಮಾರು ಎರಡು ಲಕ್ಷ ಟನ್, ನನ್ನ ತಾಲ್ಲುಕಿನಲ್ಲಿ ಸೀಜ್ ಮಾಡಿದ್ದ ಮೈನ್ಸ್‌ನ್ನು ಹಾಗೆಯೇ ಬಿಟ್ಟಿದ್ದಾರೆ. ಇವರು ಫೆನಾಲ್ಟಿ ಹಾಕುತ್ತಾರೆ. ವೆಜತಾದ್ರಿಪುರದಲ್ಲಿ ಸ್ಟಾಕ್ ಮಾಡಿದ್ದರು ನಾನು ಹೋಗುತ್ತಾ ನೋಡುತ್ತಿದ್ದೆ. ಮೈನ್ಸ್‌ನಲ್ಲಿ ಒಂದು ಟನ್‌ಗೆ 5 ರೂಪಾಯಿ ಫೆನಾಲ್ಟಿ ಹಾಕಿ ರಿಲೀಸ್ ಮಾಡುವ ಕಾನೂನು ಇಟ್ಟುಕೊಂಡರೆ ಈ ರಾಜ್ಯ ಉಳಿಯುತ್ತದೆಯೋ ಹೇಗೆ ಕೊಟ್ಟರಿ ಎಂದರೆ 5 ರೂಪಾಯಿಗೆ ಪರ್ ಟನ್. 1400 ರೂಪಾಯಿಗೆ ಮಾರುವಂಥ ಅದಿರನ್ನು 5 ರೂಪಾಯಿ ಫೆನಾಲ್ಟಿ ಹಾಕಿ ರಿಲೀಸ್ ಮಾಡುವಂಥ ಸ್ಥಿತಿ ಇವತ್ತು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನಲ್ಲಿದೆ. ಮತ್ತು ಪರ್ಮಿಟ್‌ಗೆ ದುಡ್ಡು ತೆಗೆದುಕೊರ್ಳಳುವ ಸ್ಥಿತಿ ಇದೆ. ಇಲ್ಲೀಗಲ್ ಮೈನಿಂಗ್ ಅವ್ಯಾಹತವಾಗಿ ಸರ್ಕಾರದ ಅಧೀನದಲ್ಲಿ ನಡೆಯುತ್ತಿದೆ, ಇದಕ್ಕೇ ಸನ್ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ?

ಶ್ರೀ ಕೆ. ಗೋಪಾಲ ಪೂಜಾರಿ : ಸನ್ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ನಿಮ್ಮದು ಮೈನಿಂಗ್ ಏರಿಯಾನಾ?

ಶ್ರೀ ಕೆ. ಗೋಪಾಲ ಪೂಜಾರಿ : ಹೌದು, ಸ್ವಾಮಿ.

ಶ್ರೀ ಎಸ್. ಎಲ್. ಧರ್ಮೇಗೌಡ : ಅಧ್ಯಕ್ಷರು ಈ ಕಡೆ ನೋಡಿ ಸ್ವಾಮಿ, ನೀವು ಮುಂದೆ ನೋಡುತ್ತಿರಿ, ಸ್ವಲ್ಪ ಹಿಂದೆ ನೋಡಿ...

ಅಧ್ಯಕ್ಷರು : ಆಯಿತು ಅವರನ್ನು ಕರೆದಿದ್ದೇನೆ.

ಶ್ರೀ ಎಸ್.ಎಲ್. ಧರ್ಮೇಗೌಡ : ಇಲ್ಲಾ ಸ್ವಾಮಿ, ನೀವು ನೋಡುವುದಿಲ್ಲ ಯಾವಾಗಲೂ ಆ ಕಡೆ ನೋಡುತ್ತೀರಿ, ಹಿಂದೆ ನೋಡುವುದಿಲ್ಲ, ದಯಮಾಡಿ ನೀವು ಈ ಕಡೆ ನೋಡಬೇಕು. ನಾನು ಮಾತನಾಡಬೇಕು ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು : ಆಯಿತು ಬಿಡಿ.

ಶ್ರೀ ಕೆ. ಗೋಪಾಲ ಪೂಜಾರಿ : ನನ್ನ ಕ್ಷೇತ್ರದ ಪಡುವಳಿ ಅಂತ ಇದೆ. ವೇಳೆ ಬಹಳಷ್ಟು ಸಾರಿ ಕಂಪ್ಲೇಂಟ್ ಮಾಡಿಯಾಗಿದೆ. ಅವರು ಮಂಗಳೂರಿ – ನಿಂದ ಪೋನು ಮಾಡಿದರೆ ಬರುವುದಿಲ್ಲ. ರಾತ್ರಿ ಹೊತ್ತು ಮರಳನ್ನು,

ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಮಾಡಿದರೂ ಸಹ ಅದನ್ನು ತಡೆಯುವ ಸ್ಥಿತಿಯಿಲ್ಲ. ಇಲ್ಲಿಯವರೆಗೆ ಅವರ ಮೇಲೆ ಕಾನೂನಿನ ಕ್ರಮ ಕೈಗೊಳ್ಳುವುದಕ್ಕೆ ಆಗುತ್ತಿಲ್ಲ. ರಾತ್ರಿ ಹೊತ್ತು ಮರಳು ತೆಗೆಯುತ್ತಿದ್ದಾರೆ. ಅಕ್ಕಪಕ್ಕದವರು ಸಂಪೂರ್ಣವಾಗಿ ಜಿಲ್ಲಾಧಿಕಾರಿಯವರಿಗೆ ಹಾಗೂ ನಮಗೂ ಕಂಪ್ಲೇಂಟ್ ಮಾಡಿದರೂ. ಅಲ್ಲಿ ಯಾವುದು ಇವತ್ತಿನವರೆವಿಗೂ ಒಂದು ಆ್ಯಕ್ಷನ್ ತೆಗೆದುಕೊಳ್ಳಲಿಲ್ಲ. ಅದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ಎಂದು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು : ಮಾನ್ಯ ಧರ್ಮೆಗೌಡರೆ, ನೀವು ಕೇಳುತ್ತೀರಾ? ನಿಮ್ಮದು ಮೈನಿಂಗ್ ಏರಿಯಾನಾ?

ಶ್ರೀ ಎಸ್.ಎಲ್. ಧರ್ಮೇಗೌಡ : ಮಾನ್ಯ ಅಧ್ಯಕ್ಷರೆ, ವಿಷಯಕ್ಕೆ ಸಂಬಂಧಪಟ್ಟಂತೆ ಹಿಂದೆಯೂ ಕೂಡ ಇಲ್ಲಿ ಚರ್ಚೆಮಾಡಿದ್ದೇವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಕೆಮ್ಮಣ್ಣುಗುಂಡಿಯಲ್ಲಿ ಮೈನ್ಸ್ ಬಂದ್ ಆಗಿದ್ದರೂ ಕೂಡ ರಾತ್ರಿ ಸಮಯದಲ್ಲಿ ಮೈನ್ಸ್ ಸಾಗಾಣಿಕೆ ಕೆಲಸ ನಡೆಯುತ್ತಿದೆ. ಅರಣ್ಯ ಇಲಾಖೆಯವರು ಇದಕ್ಕೆ ಅನುಮತಿ ಕೊಟ್ಟಿದ್ದೇವೆಂದು ಹೇಳುತ್ತಾರೆ. ಮತ್ತೆ ತಣಿಗೆಬೈಲ್ ಎಂಬ ಹಳ್ಳಿಯಲ್ಲಿ ಇಲ್ಲಿರತಕ್ಕಂಥ ರಸ್ತೆಯ ಮೇಲೆ ಸಾವಿರಾರು ಮೈನ್ಸ್ ಲಾರಿಗಳು ಹೋಗುವುದರಿಂದ ರಸ್ತೆಯ ಪಕ್ಕದಲ್ಲಿರತಕ್ಕಂಥ ಎಲ್ಲಾ ಮನೆಗಳು ಬಿರುಕು ಬಿಟ್ಟಿದೆ. ಇದರ ಬಗ್ಗೆ ಸಂಬಂದಪಟ್ಟಂತೆ ಜಿಲ್ಲಾಧಿಕಾರಿಗಳಿಗೆ ಗ್ರಾಮಸ್ಥರು ಮನವಿ ಕೊಟ್ಟಿದ್ದರೂ ಇದುವರೆವಿಗೂ ಏನೂ ಪ್ರಯೋಜನವಾಗಿಲ್ಲ. ನನ್ನ ಕ್ಷೇತ್ರದಲ್ಲಿ ಮೈನ್ಸ್ ಸಾಗಾಣಿಕೆ ಮಾಡುವುದರಿಂದ ಸುಮಾರು 40 ಕಿ. ಮಿ. ರಸ್ತೆ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಇದೇ ವಿಚಾರವನ್ನು ನಾನು ಹಿಂದೆಯೂ ಕೂಡ ಪ್ರಸ್ತಾಪ ಮಾಡಿದ್ದೆ. ಆದರೆ ಏನೂ ಪ್ರಯೋಜನವಾಗಲಿಲ್ಲಿ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳತಕ್ಕಂಥದ್ದು ಏನೆಂದರೆ, ಅಲ್ಲಿರುವ ಆರ್.ಟಿ.ಓ. ಇಲಾಖೆಯವರು ಏನೂ ಕ್ರಮ ತೆಗೆದು ಕೊಳ್ಳುತ್ತಿಲ್ಲ. ಪ್ರತಿದಿನ ರಾತ್ರಿ ಸಾವಿರಾರು ಲಾರಿಗಳು ಅಲ್ಲಿ ಹೋಗುತ್ತಿವೆ. ಇದರ ಬಗ್ಗೆ ಸಂಬಂಧಪಟ್ಟಂಥ ಚಿಕ್ಕಮಗಳೂರು ಜಿಲ್ಲೆಯ ಕೆಡಿಪಿ ಸಭೆಯಲ್ಲಿ ಕೂಡ ಪ್ರಸ್ತಾಪ ಮಾಡಿದಾಗ ಇದನ್ನು ಬಂದ್ ಮಾಡುತ್ತೇವೆಂದು ಹೇಳಿದರು. ಆದರೆ ಇದರ ಬಗ್ಗೆ ಏನೂ ಪ್ರಯೋಜನವಾಗಿಲ್ಲ. ಆದ್ದರಿಂದ, ಈಗಲಾದರೂ ಒಂದು ಮಾತನ್ನು ನಾನು ಒತ್ತಿ ಹೇಳುತ್ತಿದ್ದೇನೆ. ಅರಣ್ಯ ಇಲಾಖೆಯವರು ಕೆಮ್ಮಣ್ಣು ಗುಂಡಿಯಲ್ಲಿ ಗಣಿಗೆ ಅನುಮತಿ ಏನು ಕೊಟ್ಟಿದ್ದಾರೆ ಅದನ್ನು ರದ್ದುಪಡಿಸಬೇಕು. ಇವತ್ತಿನ ದಿವಸ ಅಲ್ಲಿ ಏನಾಗಿದೆ ಎಂದರೆ ಮೈನ್ಸ್‌ಗೆ ಅರಣ್ಯ ಇಲಾಖೆಯವರು ಅನುಮತಿ ಕೊಡುತ್ತಾರೆ. ಆದರೆ, ಸುಜಲದಾರ ಯೋಜನೆ ಅಡಿಯಲ್ಲಿ ಸುಮಾರು

600 ಮೀಟರ್ ಪೈಪ್‌ಲೈನ್ ಹಾಕುತ್ತೇವೆಂದು ಹೇಳಿದ್ದಕ್ಕೆ, ಅನುಮತಿ ಕೊಡುವುದಿಲ್ಲವೆಂದು ಅರಣ್ಯ ಇಲಾಖೆಯವರು ಕೇಸ್ ಹಾಕಿದ್ದಾರೆ. ಇದು ಯಾವ ನ್ಯಾಯ ಎನ್ನತಕ್ಕಂಥದ್ದು ಗೊತ್ತಾಗುತ್ತಿಲ್ಲ. ಅಲ್ಲಿ ಮರಗಿಡ ಇಲ್ಲದಿದ್ದರೂ ಕೂಡ 600 ಮೀಟರ್ ಪೈಪ್ ಹಾಕುವುದಕ್ಕೆ ಅನುಮತಿ ಕೊಡದೇ ಅಲ್ಲಿರತಕ್ಕಂಥ ಜನಗಳ ಮೇಲೆ ಕೇಸ್ ಹಾಕತಕ್ಕಂಥದ್ದು ಮತ್ತು ಮೈನ್ಸ್ ಮಾಡುವುದಕ್ಕೆ ಅವಕಾಶ ಕೊಡತಕ್ಕಂಥ ಕೆಲಸ ಆಗುತ್ತಿದೆ. ಇದಕ್ಕೆ ಕಾರಣ ಎನೆಂದರೆ ಇವತ್ತಿನದಿವಸ ಇದರಲ್ಲಿ ದೊಡ್ಡ ಲಾಬಿ ಇದೆ. ನಾವು ಸದನದಲ್ಲಿ ಮಾತನಾಡಿದ ಮೇಲೆ ಅಲ್ಲಲಿ ಲಾರಿಗಳನ್ನು ಬಂದ್ ಮಾಡತಕ್ಕಂಥ ಕೆಲಸ ಆಗಬೇಕು. ಕಾನೂನು ಪ್ರಕಾರ ಲಾರಿಗಳನ್ನು ಓಡಿಸುವುದಕ್ಕೆ ನಾವೇನು ಬೇಡವೆಂದು ಹೇಳುವುದಿಲ್ಲ. ಆದರೆ, ಅಲ್ಲಿರತಕ್ಕಂಥ ರಸ್ತೆಗಳನ್ನಾದರೂ ಸರಿ ಮಾಡಿಕೊಡಿ. ಅಲ್ಲಿ ಒಂದು ರಸ್ತೆ ಕೂಡ ಇವತ್ತಿನದಿವಸ ಸರಿಯಾಗಿಲ್ಲ.

ಅಧ್ಯಕ್ಷರು : ಉಪ ಪ್ರಶ್ನೆ ಕೇಳಿ ಎಂದು ಹೇಳಿದರೆ ತಾವು ಈ ರೀತಿ ಕೇಳುತ್ತಾ ಹೋದರೆ ಹೇಗೆ?

ಶ್ರೀ ಎಸ್. ಎಲ್. ಧರ್ಮೇಗೌಡ : ಕಡೂರು ಮತ್ತು ಮಂಗಳೂರು ರಸ್ತೆಯಲ್ಲಿ ಸುಮಾರು 18 ಸೇತುವೆಗಳ ಇವತ್ತಿನದಿವಸ ಹಾಳಾಗಿ ಹೋಗಿವೆ. ಈ ಕಡೆ ರಸ್ತೆಗಳು ರಿಪೇರಿ ಆಗುತ್ತಿಲ್ಲ ಮತ್ತೆ ಮೈನ್ಸ್ ಲಾರಿಗಳು ಹೋಗತಕ್ಕಂಥದ್ದೂ ಕೂಡ ತಪ್ಪುತ್ತಾ ಇಲ್ಲ. ಇದರಲ್ಲಿ ಇಡೀ ಇಲಾಖೆಯೇ ಶಾಮಿಲಾಗಿದೆ. ಈ ರೀತಿಯಾದರೆ ನಾವು ಯಾರಿಗೆ ಹೇಳಬೇಕು? ರಾತ್ರಿ ಸಮಯದಲ್ಲಿ ಡೈರೆಕ್ಟ್ ಹಣ ತೆಗೆದುಕೊಂಡು ಲಾರಿ ಓಡಿಸುವುದಕ್ಕೆ ಅನುಮತಿ ಕೊಡುತ್ತಿದ್ದಾರೆ. ಇದನ್ನು ನಿಲ್ಲಿಸುವುದಕ್ಕೆ ಆಗಿಲ್ಲ. ಆದ್ದರಿಂದ ಇದರ ಬಗ್ಗೆ ಸಮಗ್ರವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಯವರಿಂದ ನಾನು ಬಯಸುತ್ತೇನೆ.

ಅಧ್ಯಕ್ಷರು : ಈಗ ಎಲ್ಲರೂ ಅವಕಾಶಬೇಕೆಂದು ಕೈ ಎತ್ತಿದರೆ ಹೇಗೆ? ಈ ರೀತಿ ಆದರೆ ಇದು ಪ್ರಶ್ನೋತ್ತರ ಆಗುವುದಿಲ್ಲ. ತಮಗೆಲ್ಲಾ ಇನ್ನೊಂದು ಸಾರಿ ಅವಕಾಶ ಕೊಡುತ್ತೇನೆ. ಆದ್ದರಿಂದ ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಿ. ಇದನ್ನು ಬೇಗ ಮುಗಿಸೋಣ.

ಶ್ರೀ ಆರ್. ಧ್ರುವನಾರಾಯಣ್ : ನಾನು ಮಾತನಾಡಬೇಕಾಗಿದೆ.

ಅಧ್ಯಕ್ಷರು : ಕುಳಿತುಕೊಳ್ಳಿ. ನಿಮಗೆ ನೆಕ್ಸಟ್ ಟೈಂ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜಣ್ಣ ನವರು ತಮ್ಮ ಮುಖಾಂತರ ಚಿಕ್ಕನಾಯಕನಹಳ್ಳಿ ಭಾಗದಲ್ಲಿ ನಡೆಯುತ್ತಿರುವ ಗಣಿಗಾರಿಕೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಗಣಿಗಾರಿಕೆ ಇಲಾಖೆ

ವತಿಯಿಂದ ಕೆಲವು ಕಾನೂನುಗಳನ್ನು ತರುವುದರ ಮೂಲಕ ಅನಧಿಕೃತವಾಗಿ ನಡೆಸತಕ್ಕಂಥ ಗಣಿಗಾರಿಕೆಗಳಿಗೆ ಹಾಗೂ ಇಲ್ಲಿಂದ ಖನಿಜ ಸಾಗಾಣಿಕೆ ಮಾಡುವವರ ವಿರುದ್ಧ 2005ನೇ ಡಿಸೆಂಬರ್ ಅಂತ್ಯದೊಳಗೆ ದಂಡದ ರೂಪದಲ್ಲಿ ಮೂರು ಕೋಟಿ 36ಲಕ್ಷ ರೂಪಾಯಿಗಳಷ್ಟು ಸಂಗ್ರಹ ಮಾಡಿರತಕ್ಕಂಥದ್ದು ಒಂದು ಕಡೆ ಇದೆ. ಆದರೆ, ಇವತ್ತು ಇದರ ಬಗ್ಗೆ ಪ್ರಸ್ತಾಪ ಮಾಡಿರತಕ್ಕಂಥ ಮಾನ್ಯ ಸದಸ್ಯರುಗಳ ಭಾವನೆಗಳು ಮತ್ತು ಈ ಒಂದು ಗಣಿಗಾರಿಕೆಯಲ್ಲಿ ಅಕ್ರಮವಾಗಿ ಸಾಗಾಣಿಕೆ ಮಾಡತಕ್ಕಂಥಾದ್ದು ಹಾಗೂ ಇದರಲ್ಲಿ ರಾಜಕಾರಣಿಗಳ ಹೆಸರುಗಳನ್ನು ಉಪಯೋಗ ಮಾಡಿ ಇದಕ್ಕೆ ರಾಜಕಾರಣಿಗಳ ಅಶೀರ್ವಾದ ಕೂಡ ಇದೆ ಎಂಬ ಹಿನ್ನೆಲೆಯಲ್ಲಿ ಈ ರಾಜ್ಯದಲ್ಲಿ ಹಲವಾರು ವರ್ಷಗಳಿಂದ ಈ ಒಂದು ಗಣಿಗಾರಿಕೆಯ ದಂಧೆ ನಡೆಯುತ್ತಿರುವ ಬಗ್ಗೆ ಸರ್ಕಾರ ಇತ್ತೀಚೆಗೆ ಒಂದು ಕಾರ್ಯಾರಂಭ ಮಾಡಿದೆ, ಗಣಿಗಾರಿಕೆ ಇಲಾಖೆಯ ಮುಖಾಂತರ ಕಲವು ಸೂಕ್ಷ್ಮ ವಿಚಾರಗಳ ಬಗ್ಗೆ ಮುಂದೆ ಯಾವ ರೀತಿಯಾದ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಎನ್ನತಕ್ಕಂಥದರ ಬಗ್ಗೆ ಸರ್ಕಾರ ನೀತಿಯನ್ನು ಪ್ರಕಟಿಸುವುದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಈ ಗಣಿ ಅಕ್ರಮವನ್ನು ನಿಲ್ಲಿಸುವುದಕ್ಕೆ ಸ್ವಲ್ಪ ಸಮಯವನ್ನು ಕೊಟ್ಟರೆ ಒಳ್ಳೆಯದು. ಈ ವಿಷಯದಲ್ಲಿ ನಮ್ಮ ಸರ್ಕಾರದ ಹೊಸ ನೀತಿಗಳನ್ನು ಪ್ರಕಟಿಸಬೇಕೆಂಬ ಚಿಂತನೆಯನ್ನು ಮಾಡಿದ್ದೇವೆ. ಗಣಿಗಾರಿಕೆಯಲ್ಲಿ ನಡೆಯುತ್ತಿರುವ ಅಕ್ರಮ ದಂಧೆಯ ಬಗ್ಗೆ ಮಾನ್ಯ ಸದಸ್ಯರುಗಳಿಗೆ ಇರತಕ್ಕಂಥ ಕಾಳಜಿ ಏನಿದೆ, ಅದನ್ನು ನಾನು ನೆನಪಲ್ಲಿಟ್ಟುಕೊಂಡು ಇವತ್ತಿನ ದಿವಸ ರಾಜ್ಯದ ಆಸ್ತಿಯನ್ನು ಉಳಿಸತಕ್ಕಂಥದ್ದಕ್ಕೆ ಮತ್ತು ಇಲ್ಲಿಂದ ಖನಿಜಗಳನ್ನು ಹೊರ ರಾಜ್ಯ, ಹೊರ ದೇಶಕ್ಕೆ ರಪ್ತು ಮಾಡತಕ್ಕಂಥ ತೀರ್ಮಾನಗಳು ಎನಿವೆ, ಈ ಎಲ್ಲಾ ವಿಷಯಗಳ ಬಗ್ಗೆ ಮುಂದಿನ ದಿನಗಳಲ್ಲಿ ಸಮಗ್ರವಾದ ಒಂದು ಹೊಸ ನೀತಿಗಳನ್ನು ತರತಕ್ಕಂಥದರ ಬಗ್ಗೆ ಚಿಂತನೆ ಇದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇದಕ್ಕೆ ಸ್ವಲ್ಪ ಕಾಲಾವಕಾಶವನ್ನು ಕೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟಂತೆ ನನ್ನದೊಂದು ಸಲಹೆ ಏನೆಂದರೆ, ಮೈನಿಂಗ್ ಎರಿಯಾದಲ್ಲಿ ಸಾಕಷ್ಟು ಅಕ್ರಮಗಳು ಆಗಿವೆ. ಆದ್ದರಿಂದ, ತಾವು ಇದರ ಬಗ್ಗೆ ಒಂದು ನೀತಿಯನ್ನು ರೂಪಿಸುವ ಮೊದಲು ಆ ಮೈನಿಂಗ್ ಇರತಕ್ಕಂಥ ಪ್ರದೇಶಗಳ ಶಾಸಕರುಗಳನ್ನು ಕರೆದು ಸಮಾಲೋಚನೆ ಮಾಡಿ ಅನಂತರ ಇದರ ಬಗ್ಗೆ ಒಂದು ನೀತಿಯನ್ನು ಮಾಡತಕ್ಕಂಥದ್ದು ಒಳ್ಳೆಯದೆಂಬುದು ನನ್ನ ಅಭಿಪ್ರಾಯ.

ಶ್ರೀ ಸಿ.ಎಸ್.ನಾಡಗೌಡ(ಅಪ್ಪಾಜಿ) : ಗಣಿಗಾರಿಕೆ ಬಗ್ಗೆ ಹೇಳುವುದಾದರೆ, ಗಣಿಗಳು ನಮ್ಮ ರಾಜ್ಯದ ಮತ್ತು ಈ ದೇಶದ ಸಂಪತ್ತು. ಇದಕ್ಕೆ ಸಂಬಂಧಪಟ್ಟಂತೆ ಒಂದು ನೀತಿಯನ್ನು ಪ್ರಕಟಣೆ ಮಾಡುವುದಕ್ಕೆ ಸ್ವಲ್ಪ ಸಮಯಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳಿಕೊಂಡಿದ್ದಾರೆ. ಆದರೆ, ಇದಕ್ಕೆ ಸಂಬಂಧಪಟ್ಟಂತೆ ನಾನು ಕೇಳುವುದೇನೆಂದರೆ, ನೀತಿ ಪ್ರಕಟಣೆ ಮಾಡುವವರೆಗೂ ಇದನ್ನು ಸ್ಥಗಿತಗೊಳಿಸುತ್ತೀರಾ? ಈ ರಾಜ್ಯದ ನಮ್ಮ ಆಸ್ತಿ ಏನಿದೆ ಅದನ್ನು ಕಾಪಾಡುವಂಥ ಒಂದು ದೃಡನಿರ್ಧಾರವನ್ನು ತಾವು ಕೈಗೊಳ್ಳುತ್ತೀರಾ ಎನ್ನತಕ್ಕಂಥದ್ದು ನನ್ನ ಪ್ರಶ್ನೆ ದಿನಾ ಏನಾಗುತ್ತಿದೆ ಎಂಬುದನ್ನು ನಾವೆಲ್ಲಾ ಕಣ್ಣೆದುರುಗಡೆ ನೋಡುತ್ತಿದ್ದೇವೆ. ಆದ್ದರಿಂದ, ಮೊದಲು ನಿಲ್ಲಿಸಿ. ಅನಂತರ ತಾವು ನೀತಿ ಪ್ರಕಟಣೆ ಮಾಡಿ. ಆಮೇಲೆ ಪುನಃ ಚಾಲನೆ ಕೊಡಿ ಬೇಡವೆಂದು ಹೇಳುವುದಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾವು ಮತ್ತು ಡಿ.ಸಿ. ರವರೆಲ್ಲರೂ ಕುಳಿತು ಒಂದು ಸಭೆ ಮಾಡಿ ಸಾಯಂಕಾಲ 7 ಗಂಟೆಯ ಮೇಲೆ ಗಣಿಗಾರಿಕೆ ಮಾಡಬೇಡಿ ಎಂದು ಹೇಳಿದ್ದೇವೆ. ರಾತ್ರಿಯಾದಮೇಲೆ ಬ್ಲಾಸ್ಟ್ ಮತ್ತು ಟ್ರಾನ್ಸ್‌ಪೋರ್ಟ್ ಮಾಡತಕ್ಕಂಥದ್ದನ್ನಾದರೂ ನಿಲ್ಲಿಸಿ ಎಂದು ಹೇಳಿದ್ದೇವೆ. ಲೀಗಲ್ ಆಗಿ ಇರುವ ಬಗ್ಗೆ ಕೂಡ ಆಗುತ್ತಿರುವ ತೊಂದರೆಯ ಬಗ್ಗೆ ಎಲ್ಲರೂ ಕೇಳಿದ್ದಾರೆ. ಆದರೆ, ಪರ್ಮಿಟ್ ಇರುವವರ ಬಗ್ಗೆ ನಾನು ಮತ್ತು ಮಾನ್ಯ ರಾಜಣ್ಣನವರು ಇಲ್ಲಿ ಮಾತನಾಡಿಲ್ಲವೆಂದು ಕಾಣುತ್ತದೆ. ಇಲ್‌ಲೀಗಲ್ ಆಗಿ ಮಾಡುತ್ತಿರುವವರೆಂದರೆ ಯಾರು? ರಾತ್ರಿ ಸಮಯದಲ್ಲಿ ಜೆಸಿಬಿ ತೆಗೆದುಕೊಂಡು ಲಾರಿಗಳಲ್ಲಿ ಮೈನ್ಸ್ ತುಂಬಿಕೊಂಡು ಪೊಲೀಸ್‌ನವರು ಬರುತ್ತಾರೆಂದರೆ ನಾಲ್ಕು ದಿಕ್ಕುಗಳಲ್ಲಿ ನಿಂತುಕೊಂಡು ಮೊಬೈಲ್ ಫೋನ್‌ನಿಂದ ಹೇಳಿದ ಕೂಡಲೇ ಸೈಟ್‌ನಿಂದ ಕ್ಲಿಯರ್ ಆಗತಕ್ಕಂಥದ್ದು ನಡೆಯುತ್ತಿದೆ. ಇದು ಸರ್ಕಾರಿ ಮತ್ತು ಅರಣ್ಯ ಭೂಮಿಯಲ್ಲಿ ಕೂಡ ನಡೆಯುತ್ತಿದೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಸರ್ಕಾರ ಇದರ ಬಗ್ಗೆ ನೀತಿಯನ್ನು ಜಾರಿಗೆ ತುವವರೆಗೂ ಸಾಯಂಕಾಲ 6 ಗಂಟೆ ಅಥವಾ 7 ಗಂಟೆ ನಂತರವಾದರೂ ಟ್ರಾನ್ಸ್‌ಪೋರ್ಟೆಷನ್ ಮತ್ತು ಮೈನಿಂಗ್ಸ್ ಹಾಗೂ ಬ್ಲಾಸ್ಟಿಂಗ್ಸ್‌ನ್ನು ಸ್ಟಾಪ್ ಮಾಡತಕ್ಕಂಥದ್ದು ಆಗಬೇಕು.

ಶ್ರೀ ಕೆ. ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವವರ ಬಗ್ಗೆ ನಾವು ಕೇಳಿದ್ದೇವೆ. ಪರವಾನಿಗೆ ಪಡೆದುಕೊಂಡಿರ ತಕ್ಕಂಥವರೂ ಕೂಡ ಇರತಕ್ಕಂಥದ್ದು ನಿಯಮಗಳ ಪ್ರಕಾರ ಗಣಿಗಾರಿಕೆ ನಡೆಸುತ್ತಿಲ್ಲ. ಇದು ಮಾನ್ಯ ಮಾಧುಸ್ವಾಮಿಯವರಿಗೂ ಗೊತ್ತಿದೆ ಎಂದು ನಾನು

ತಿಳಿದುಕೊಂಡಿದ್ದೇನೆ. ಈಗ ನನ್ನ ಪ್ರಶ್ನೆ ಏನೆಂದರೆ, ಅರಣ್ಯ ಜಾಗದಲ್ಲಿ ಗಣಿಗಾರಿಕೆ ಮಾಡತಕ್ಕಂಥ ಎಷ್ಟು ಜನರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಮಾನ್ಯ ಅರಣ್ಯ ಸಚಿವರು ಬೆಳಕು ಚೆಲ್ಲಬೇಕೆಂದು ತಮ್ಮ ಮುಖಾಂತರ ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಧರ್ಮೇಗೌಡರು ಈಗಾಗಲೇ ಹೇಳಿದ ಹಾಗೆ ಓವರ್ ಲೋಡ್ ಹಾಕಿ ಇರತಕ್ಕಂಥ ರಸ್ತೆಗಳೆಲ್ಲವನ್ನೂ ಹಾಳುಮಾಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗುತ್ತದೆ ಎನ್ನತಕ್ಕಂಥದ್ದನ್ನು ಮಾನ್ಯ ಸಾರಿಗೆ ಸಚಿವರು ಈ ಸಂದರ್ಭದಲ್ಲಿ ಹೇಳಬೇಕು. ಮತ್ತೆ ಮಾನು ಮುಖ್ಯಮಂತ್ರಿಗಳು ಉತ್ತರ ಹೇಳತಕ್ಕಂಥ ಸಂದರ್ಭದಲ್ಲಿ 3 ಕೋಟಿ ರೂಪಾಯಿಗಳಷ್ಟು ದಂಡವಸೂಲಿ ಮಾಡಿದ್ದೇವೆಂದು ಹೇಳಿದರು. ಆದರೆ, ಬರವಣಿಗೆಯಲ್ಲಿರತಕ್ಕಂಥ ಉತ್ತರದಲ್ಲಿ 15 ಲಕ್ಷ 77 ಸಾವಿರ ರೂಪಾಯಿ ಮಾತ್ರ ಆಗುತ್ತದೆ. ಆದ್ದರಿಂದ, ಯಾವುದು ಸರಿ ಎನ್ನತಕ್ಕಂಥದ್ದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಕ್ಲಾರಿಫೈ ಮಾಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಮೀಸಲು ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡಬಾರದು. ಅಂದರೆ ಮೀಸಲು ಅರಣ್ಯ ಪ್ರದೇಶದ 20 ಕಿ. ಮೀ. ಸುತ್ತಮುತ್ತಲಿನ ಪ್ರದೇಶದಲ್ಲಿ ಗಣಿಗಾರಿಕೆ ಮಾಡಬಾರದೆಂಬ ಆದೇಶ ಇದೆ. ಇದನ್ನು ಉಲ್ಲಂಘಿಸಿ ನಮ್ಮ ಚಾಮರಾಜನಗರದಲ್ಲಿ ಮೀಸಲಾಗಿರುವ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಯುತ್ತಿದೆ. ದಯಮಾಡಿ ಅದನ್ನು ತಪ್ಪಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಮನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಿಂದ ಸುಮಾರು 50 ರಿಂದ 60 ಕಿ. ಮಿ. ದೂರದಲ್ಲಿರುವ ಪ್ರದೇಶಗಳಲ್ಲಿ ಅಂದರೆ ಬೆಂಗಳೂರಿನ ಸುತ್ತಮುತ್ತ ಇರತಕ್ಕಂಥ ಮಾನ್ಯ ಮುಖ್ಯಮಂತ್ರಿಯವರ ಕ್ಷೇತ್ರವಾದ ರಾಮನಗರ, ಚನ್ನಪಟ್ಟಣ ಮತ್ತು ಸಾತನೂರು, ಕನಕಪುರ ಪ್ರದೇಶಗಳೆಲ್ಲಾ ಇವತ್ತೂ ಕೂಡ ಇಲ್‌ಲೀಗಲ್ ಆಗಿ ಗಣಿಗಾರಿಕೆ ನಡೆಯುತ್ತಿದೆ. ಇಲ್ಲಿ ನಡೆಯುತ್ತಿರುವುದರ ಬಗ್ಗೆ ಮೊದಲು ಏನಾದರೂ ಮಾಡಿ. ಮಾನ್ಯ ಸದಸ್ಯರು ಚಿಕ್ಕಮಗಳೂರು ಮತ್ತು ಮಂಗಳೂರಿನಲ್ಲಿ ಆಗುತ್ತಿರುವ ಗಣಿಗಾರಿಕೆ ಬಗ್ಗೆ ಹೇಳುತ್ತಿರುವುದರಿಂದ ನಾನು ಬೆಂಗಳೂರು ಸುತ್ತಮುತ್ತಲೂ ಆಗುತ್ತಿರುವ ಬಗ್ಗೆ ಹೇಳಿದ್ದೇನೆ.

ಅಧ್ಯಕ್ಷರು : ಈಗ ಅರಣ್ಯ ಸಚಿವರು ಮಾತನಾಡುತ್ತಾರೆ.

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಅರಣ್ಯದಲ್ಲಿ ಒತ್ತುವರಿ ಮಾಡಿಕೊಂಡು ಮೈನಿಂಗ್ ಮಾಡುತ್ತಾರೆಂದು ಮಾನ್ಯ ರಾಜಣ್ಣರವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಸರ್ವೆಮಾಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯವರು ಆದೇಶ ಮಾಡಿದ್ದಾರೆ. ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಗಣಿಗಾರಿಕೆ ಮಾಡುತ್ತಿರುವವರ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕೆಂದು ಆದೇಶವನ್ನು ಮಾಡಲಾಗಿದೆ. ರಾತ್ರಿ 7 ಗಂಟೆ ಮೇಲೆ ಕದ್ದು ಸಾಗಾಣಿಕೆ ಮಾಡತಕ್ಕಂಥದ್ದನ್ನು ನಿಲ್ಲಿಸಬೇಕೆಂದು ಸನ್ಮಾನ್ಯ ಮಾಧುಸ್ವಾಮಿ ಯವರು ಈಗಾಗಲೇ ಹೇಳಿದ್ದಾರೆ. ಇದು ಅಕ್ಷರಶಃ ನಿಜ. ರಾತ್ರಿ 7 ಗಂಟೆಯ ಮೇಲೆ ಸಾಗಾಣಿಕೆ ಮತ್ತು ಗಣಿಗಾರಿಕೆ ನಡೆಸುವುದಕ್ಕೆ ಅರಣ್ಯ ಇಲಾಖೆಯಿಂದ ಮತ್ತು ಮೈನ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನಿಂದ ಕೂಡ ಪರ್ಮಿಟ್ ಕೊಟ್ಟಿಲ್ಲ. ಈ ರೆಡೂ ಇಲಾಖೇಗೆ ಮೋಸ ಮಾಡಿ ಸಾವಿರಾರು ಕೋಟಿ ರೂಪಾಯಿಗಳನ್ನು ಮೋಸ ಮಾಡತಕ್ಕಂಥ ವಂಚಕರು ಇವತ್ತು ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಆದೇಶದ ಪ್ರಕಾರ ಇದನ್ನು ತಡೆಯುವುದಕ್ಕೆ ನಮ್ಮ ಅಧಿಕಾರಿಕೆಗಳಿಗೆ ಸೂಚನೆ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಅರಣ್ಯದಲ್ಲಿ ಆಗತಕ್ಕಂಥ ಅಕ್ರಮವನ್ನು ಸಂಪೂರ್ಣವಾಗಿ ತಡೆಗಟ್ಟುವಂಥ ಕೆಲಸವನ್ನು ಈ ಸರ್ಕಾರ ಮಾಡುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರ ಅಭಿಪ್ರಾಯ ನೋಡಿದಾಗ ಈ ವಿಷಯಕ್ಕೆ ಸದನದಲ್ಲಿ ಹೆಚ್ಚಿನ ಮಹತ್ವ ಇದೆ ಎಂದು ತಿಳಿಯುತ್ತದೆ. ಆದರೆ, ನನಗೆ ಇರತಕ್ಕಂಥ ಒಂದು ಡೌಟ್ ಎನೆಂದರೆ, ಇವೆಲ್ಲಾ ನೆನ್ನೆದಿವಸದಿಂದಲೇ ಪ್ರಾರಂಭವಾಗಿದೆಯೇ ಎನ್ನತಕ್ಕಂಥ ಡೌಟ್ ಆಗಿದೆ.

ಅಧ್ಯಕ್ಷರು : ಮೊದಲಿನಿಂದಲೂ ಇದೆ. ಈ ಸಭೆಯನ್ನು ನೆನ್ನೆ ದಿವಸದಿಂದ ಪ್ರಾರಂಭ ಮಾಡಿಲ್ಲ.

ಗೊಂದಲ

ಶ್ರೀ ಜೆ. ಸಿ. ಮಾಧುಸ್ವಾಮಿ : ನಾವು ಈ ವಿಷಯವನ್ನು ಮೊದಲ ಸಾರಿ ಏನೂ ಪ್ರಸ್ತಾಪ ಮಾಡಿಲ್ಲ. ಈ ವಿಷಯವನ್ನು ಸುಮಾರು 10 ಸಾರಿ ಇಲ್ಲಿ ಪ್ರಸ್ತಾಪ ಮಾಡಿರಬಹುದು. ಆದರೆ, ಇವರೇ ನೆನ್ನೆದಿವಸ ಬಂದ ಹಾಗೆ ಕಾಣುತ್ತದೆ.

ಅಧ್ಯಕ್ಷರು : ಈಗ ಮಾನ್ಯ ಮಂತ್ರಿಗಳಾದ ಸಾರಿಗೆ ಸಚಿವರೇ ಈ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ. ಈಗ ಎಲ್ಲಾ ಯುವಕರುಗಳು ಹುರುಪಿನಿಂದ

ಬಂದಿದ್ದೀರಿ. ನೀವು ಏನಾದರೂ ಮಾಡುತ್ತಾರೆಂಬ ಆಸೆಯಿಂದ ಒತ್ತಿ ಒತ್ತಿ ಹೇಳುತ್ತಿದ್ದಾರೆ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಅದನ್ನೇ ನಾನು ಹೇಳುವುದಕ್ಕೆ ಬಂದಿರುತೇನೆ. ಮಾನ್ಯ ಸದಸ್ಯರಾದ ಶ್ರೀ ರಾಜಣ್ಣನವರು ಟ್ರಾನ್ಸ್‌ಪೋರ್ಟ್ ಎಂದು ಹೇಳಿದರು, ನಾನು ಅದೇ ವಿಚಾರವನ್ನು ಹೇಳುವುದಕ್ಕೆ ಬಂದಿದ್ದೇನೆ. ನಮ್ಮ ಮುಖ್ಯಮಂತ್ರಿಗಳು ಬಹುಶಃ ನಮ್ಮಗಳಿಗೆ ಫಾರೆಸ್ಟ್ ಮಿನಿಸ್ಟರ್ ಆಗಿರಬಹುದು, ಸಾರಿಗೆ ಸಚಿವರಾಗಿರಬಹುದು ಈಗಾಗಲೇ ಇದರ ಬಗ್ಗೆ ಮಾತನಾಡಿ ಇದಕ್ಕೆಲ್ಲಾ ಒಂದು ಕಾಯಕಲ್ಪವನ್ನು ಕೊಡಬೇಕೆನ್ನುವುದರ ಬಗ್ಗೆ ನಮಗೆಲ್ಲರಿಗೂ ಸೂಚನೆಯನ್ನು ಕೊಟ್ಟಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿಯೂ ಕೂಡಾ ಮರಳು ಸಾಗಾಣಿಕೆ ದಂದೆಯ ಬಗ್ಗೆ ನಾವು ಮತ್ತು ನೀವುಗಳೂ ಸಹ ತೊಂದರೆಯನ್ನು ಅನುಭವಿಸುತ್ತಿದ್ದೇನೆ ಅದರ ಬಗ್ಗೆ ಅಟ್‌ಲಿಸ್ಟ್ ಅರಿವು ಇದೆ. ನಮ್ಮ ಶ್ರೀನಿವಾಸಗೌಡರು ಕೋಲಾರದ ಬಗ್ಗೆ ಹೇಳಿದ್ದಾರೆ. ಅದು ಕೋಲಾರಕ್ಕೆ ಏನೂ ಸೀಮಿತವಾಗಿರುವುದಿಲ್ಲ. ನಾನು ಏತಕ್ಕಾಗಿ ರಿಕ್ವೆಸ್ಟ್ ಮಾಡಿದೆ ಎಂದರೆ, ಇಷ್ಟೆಲ್ಲಾ 10–15 ವರ್ಷದಿಂದ ಈ ರೀತಿಯಾಗಿ ಸತತವಾಗಿ ನಡೆಯುತ್ತಿರುವುದರ ಬಗ್ಗೆ ಎಕಾಎಕಿ ಇಷ್ಟೊಂದು ಸದನದಲ್ಲಿ ಗಂಭೀರವಾಗಿ ಚರ್ಚೆ ನಡೆಯುತ್ತಿದೆ. ಸದನದಲ್ಲಿ ಚರ್ಚೆ ನಡೆಯುವುದಕ್ಕೆ ಮುಂಚಿತವಾಗಿಯೇ ನಮ್ಮ ಮುಖ್ಯಮಂತ್ರಿಗಳು ಇದರ ಬಗ್ಗೆ ಮೊನ್ನೆ ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಿ ಸೂಚನೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಒಂದು ಅವಕಾಶವನ್ನು ಕೊಡಿ ಎಂದು ಈಗಾಗಲೇ ಹೇಳಿದ್ದಾರೆ. ಆದರೂ ಸಹ ಕಳೆದ 10–15 ವರ್ಷಗಳಿಂದ ಸತತವಾಗಿ ನಡೆಯುತ್ತಿರು ವಂತಹದ್ದನ್ನು ಏಕಾಏಕಿಯಾಗಿ ಒಂದೇ ಬಾರಿ ಇದನ್ನು ನಿಲ್ಲಿಸುವುದರ ಬಗ್ಗೆ ಕಾನೂನಿನ ಇತಿಮಿತಿಯನ್ನು ನೋಡಬೇಕಾಗುತ್ತದೆ. ಇದನ್ನು ಯಾವ ರೀತಿಯಾಗಿ ನಿಲ್ಲಿಸಬೇಕು, ಇದರ ಬಗ್ಗೆ ಕಾನೂನಿನಲ್ಲಿ ಯಾವ ರೀತಿಯಾಗಿ ಭದ್ರ ಮಾಡಬೇಕು. ಇದಕ್ಕೆ ಅವಕಾಶ ಮಾಡದೆಯೇ ಇದರ ಬಗ್ಗೆ ಬಹಳ ಉದ್ವೇಗ ಇದೆಯಲ್ಲಾ ಎಂದು ನಾನು ಹೇಳಿದೆ.

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ನಾವು ಇಲ್ಲೀಗಲ್ ಎಂಬ ಪದವನ್ನು ಬಳಸಿದ್ದೇವೆ. ಅಕ್ರಮ ಗಣಿಗಾರಿಕೆ ಎಂಬ ಪದವನ್ನು ಬಳಸಿದ್ದೇವೆ.

ಅಧ್ಯಕ್ಷರು : ಇದರ ಬಗ್ಗೆ ಗಲಾಟೆ ಏಕೆ? ಒಬ್ಬೊಬ್ಬರಾಗಿ ಮಾತನಾಡಿ.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಕಳೆದ 20 ತಿಂಗಳಲ್ಲಿ....

ಶ್ರೀಜೆ.ಸಿ.ಮಾಧುಸ್ವಾಮಿ : ನಾವುಗಳು ಇದು ಸ್ಟಾರ್ಟ್ ಅದಾಗಿ ನಿಂದಲೂ ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ : ಕಳೆದ 20 ತಿಂಗಳಲ್ಲಿ ಇದರ ಬಗ್ಗೆ ಕೇಳಲಿಲ್ಲ. ಈಗ ಇಷ್ಟೊಂದು ಕಾಳಜಿ ವಹಿಸುತ್ತಿದ್ದಾರೆ. ಇವತ್ತೇನಾದರೂ ಅದು ಆಗಿದೆಯೇ?

ಅಧ್ಯಕ್ಷರು : ಆಯಿತು, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಅದು ಇವತ್ತೇನಾದರೂ ಅಗಿದೆಯೇ; ಇದರ ಬಗ್ಗೆ 20 ತಿಂಗಳಿಂದಲೂ ಇದರ ಬಗ್ಗೆ ಯಾರೂ ಪ್ರೆಷರ್ ಮಾಡಲಿಲ್ಲ. ಒಂದು ತಿಂಗಳಲ್ಲಿ ಆಗಲಿ ಎಂದು ಹೇಳಿದರೆ ಹೇಗೆ? ಇದರ ಬಗ್ಗೆ ಇಷ್ಟೊಂದು ಕಾಳಜಿ ವಹಿಸಿದ್ದಾರೆಂದು ಹೇಳಿ.

ಅಧ್ಯಕ್ಷರು : ಆಯಿತು, ಮಾನ್ಯ ಮುಖ್ಯಮಂತ್ರಿಗಳು ಮಾತ ನಾಡುವುದಕ್ಕೆ ಎದ್ದು ನಿಂತಿದ್ದಾರೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಏನು ಈ ಗಣಿಗಾರಿಕೆ ವಿಷಯದಲ್ಲಿ ಸಮಯವನ್ನು ಕೇಳಿದ್ದೇನೆ, ಅದಕ್ಕಿಂತಲೂ ಹೆಚ್ಚಾಗಿ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ರಾಜ್ಯ ಸರ್ಕಾರದ ವತಿಯಿಂದ ರಾಜ್ಯ ಮಟ್ಟದಲ್ಲಿ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಗಳ ಅವರ ನೇತೃತ್ವದಲ್ಲಿ ಏನು ಒಂದು ಟಾಸ್ಕ್‌ಫೋರ್ಸ್ ಇದೆ, ಅದೇ ರೀತಿ ಜಿಲ್ಲೆಗಳ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಟಾಸ್ಕ್‌ಫೋರ್ಸ್ ಏನು ಇದೆ, ಅದಕ್ಕೆ ತಕ್ಷಣವೇ ಆದೇಶವನ್ನು ಕೊಡುವಂತಹ ತೀರ್ಮಾವನ್ನು ಮಾಡಿದ್ದೇವೆ. ರಾತ್ರಿ ಸಂದರ್ಭದಲ್ಲಿ ಏನು ಗಣಿಗಾರಿಕೆಯನ್ನು ನಿಲ್ಲಿಸುವುದರ ಬಗ್ಗೆ ಮಾನ್ಯ ಸದಸ್ಯರುಗಳು ಗಮನಕ್ಕೆ ತಂದಿದ್ದಾರೆ, ಅದನ್ನು ತಕ್ಷಣ ನಿಲ್ಲಿಸುವ ಬಗ್ಗೆ ಆದೇಶವನ್ನು ಕೊಡುವುದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ ಈಗ ನಮ್ಮ ಸದಸ್ಯರುಗಳು ಏನು ತಮ್ಮ ಜಿಲ್ಲೆಯೊಳಗಡೆ ಹಲವಾರು ರೀತಿಯ ಸಾಗಾಣಿಕೆಗಳು ನಡೆಯುತ್ತಿದೆ. ಎಂಬ ಬಗ್ಗೆ ಹಲವಾರು ವಿಷಯಗಳನ್ನು ಹಾಗೂ ಮಾಹಿತಿಗಳನ್ನು ನೀಡಿದ್ದಾರೆ. ನಾವು ಹೊಸದಾಗಿ ಜವಾಬ್ದಾರಿಯನ್ನು ವಹಿಸಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಈ ವಿಷಯದ ಬಗ್ಗೆ ಸಮಗ್ರವಾಗಿ ನಾನು ಈಗಾಗಲೇ ಹೇಳಿದ ಹಾಗೆ ಒಂದು ಹೊಸ ನೀತಿಯನ್ನು ತರುವುದು ಹಾಗೂ ಸದಸ್ಯರುಗಳು ಅದರಲ್ಲೂ ಮಾನ್ಯ ಮಾಧುಸ್ವಾಮಿಯವರು ಏನು ಈ ರಾಜ್ಯದ ಸಂಪತ್ತು ಏನ್ನುವ ಮಾತನ್ನು ಆಡಿದ್ದಾರೆ ಅದರ ಬಗ್ಗೆ ಗಮನ

ಹರಿಸುತ್ತೇವೆ. ಬೆಂಗಳೂರಿನಿಂದ ಒಂದು ಗಣಿಗಾರಿಕೆಯನ್ನು ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಇದು ಬೆಂಗಳೂರಿಗೆ ಮಾತ್ರ ಸೀಮಿತವಾಗಿಲ್ಲ, ಹೊರರಾಜ್ಯದ ಹಲವಾರು ಜನರು ಈ ವಿಷಯದಲ್ಲಿ ಪರವಾನಿಗೆಯನ್ನು ತೆಗೆದುಕೊಂಡಿರುವುದೇ ಒಂದು ಕಡೆ, ಆ ಪರವಾನಿಗೆಯ ಹೆಸರಿನಲ್ಲಿ ಬೇರೆ ಬೇರೆ ಜಾಗದಲ್ಲಿ ಯಾವ ಯಾವ ರೀತಿಯಾಗಿ ಗಣಿಗಾರಿಕೆ ನಡೆಯುತ್ತಿದೆ. ಅದರ ಬಗ್ಗೆ ಸಮಗ್ರವಾಗಿ ತನಿಖೆಯನ್ನು ನಡೆಸಿ ಇದಕ್ಕೆ ಸಂಪೂರ್ಣವಾದ ಅಂತ್ಯವನ್ನು ಕಾಣುವುದರ ಬಗ್ಗೆ ನಿರ್ಧಾರಗಳನ್ನು ಸರ್ಕಾರ ಮಾಡುವುದಕ್ಕೆ ತೀರ್ಮಾನವನ್ನು ಮಾಡುತ್ತೇವೆ.

3. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ : 21–03–2006ರ 1ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 42 ಪ್ರಶ್ನೆಗಳ ಪೈಕಿ 40 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅನುಬಂಧ –1

4 ಸಭೆಯ ಮುಂದಿಡಲಾಗದ ಕಾಗದ ಪತ್ರಗಳು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ಕರ್ನಾಟಕ ಮಧ್ಯಮಾವದಿ ವಿತ್ತೀಯ ಯೋಜನೆ 2005–09 ರ ಪ್ರತಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಬಿ. ಎಸ್. ಯಡಿಯೂರಪ್ಪ (ಉಪಮುಖ್ಯ ಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ಭಾರತ ಸಂವಿಧಾನ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಿಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಕರ್ನಾಟಕ ಸರ್ಕಾರದ ದಿನಾಂಕ : 31ನೇ ಮಾರ್ಚಿ 2005ರ ಅಂತ್ಯದವರೆಗಿನ ವಾಣಿಜ್ಯ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

I. **ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿ)** : **ಮಾನ್ಯ ಅಧ್ಯಕ್ಷರು 1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ** :

1. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.